ಅವರಿಗೆ ನೀರು ಕೊಡಲು ಒಪ್ಪಿಕೊಂಡನು. ಮೂವರೂ ಚಪಾತಿಯನ್ನು ಸಮನಾಗಿ ಹಂಚಿಕೊಂಡು ತಿಂದರು. ಆಗಂತಕನು ಅವರು ಮಾಡಿದ ಉಪಕಾರಕ್ಕೆ ಐದು ಬೆಳ್ಳಿ ನಾಣ್ಯಗಳನ್ನು ಕೊಟ್ಟು 'ನೀವೇ ಹಂಚಿಕೊಳ್ಳಿರಿ' ಎಂದು ಹೇಳಿ ಹೊರಟು ಹೋದನು.

'ಈಗ ಹೇಳು ಪ್ರತಿಯೊಬ್ಬರಿಗೆ ಬಂದ ನಾಣ್ಯಗಳೆಷ್ಟು?' ಎಂದು ಕರಿಯಬೆಕ್ಕು ಮಂಗನನ್ನು ಕೇಳಿತು. ಮಂಗ ಸುಲಭವಾಗಿ ಲೆಕ್ಕ ಮಾಡಿತು.

'ಅಣ್ಣನಿಗೆ ನಾಲ್ಕು ನಾಣ್ಯ, ತಮ್ಮನಿಗೆ ಒಂದು ನಾಣ್ಯ' ಎಂದು ಮಂಗ ಅವಕ್ಕೆ ಹೇಳಿತು.

ಆಗ ಕರಿಯಬೆಕ್ಕು, 'ಅದು ಹೇಗೆ? ಎಂಬುದನ್ನು ತಿಳಿಸು' ಎಂದಿತು.

ಆಗ ಮಂಗ – 'ಅಣ್ಣ ತಮ್ಮಂದಿರಲ್ಲಿ ಒಟ್ಟು ಹದಿನೈದು ಚಪಾತಿಗಳಾದವು. ಮೂವರೂ ಸಮನಾಗಿ ಹಂಚಿಕೊಂಡು ಐದೈದು ಚಪಾತಿ ತಿಂದರು. ಅಣ್ಣ ತನ್ನ ಒಂಬತ್ತು ಚಪಾತಿಯಲ್ಲಿ ಐದು ಇಟ್ಟುಕೊಂಡು ಆಗಂತುಕನಿಗೆ ನಾಲ್ಕು ಚಪಾತಿ ಕೊಟ್ಟನು. ಅದಕ್ಕಾಗಿ ಅಣ್ಣನಿಗೆ ನಾಲ್ಕು ಬೆಳ್ಳಿಯ ನಾಣ್ಯ ಕೊಡಬೇಕು. ತಮ್ಮ ತನ್ನ ಆರು ಚಪಾತಿಯಲ್ಲಿ ಐದು ಇಟ್ಟುಕೊಂಡು ಆಗಂತುಕನಿಗೆ ಒಂದೇ ಚಪಾತಿ ಕೊಟ್ಟನು. ಅದಕ್ಕಾಗಿ ತಮ್ಮನಿಗೆ ಒಂದೇ ಬೆಳ್ಳಿಯ ನಾಣ್ಯ ಕೊಡಬೇಕು' ಎಂದು ಮಂಗ ಅವಕ್ಕೆ ತಿಳಿಸಿ ಹೇಳಿತು. ಅವು ಮಂಗನ ಉತ್ತರವನ್ನು ಒಪ್ಪಿಕೊಂಡವು. ಮಂಗನ ಜಾಣ್ಮೆಯನ್ನೂ ಮೆಚ್ಚಿಕೊಂಡವು.

'ಮಂಗಣ್ಣ, ನೀನೇ ಬೆಣ್ಣೆಯಲ್ಲಿ ಮೂರು ಪಾಲು ಮಾಡು' ಎಂದು ಬೆಕ್ಕುಗಳು ಹೇಳಿದವು. ಅದರಂತೆ, ಮಂಗ ಬಾಳೆ ಎಲೆಯಲ್ಲಿ ಮೂರು ಪಾಲು ಮಾಡಿ ಇಟ್ಟಿತು. 'ನಿಮ್ಮ ಪಾಲು ತೆಗೆದುಕೊಳ್ಳಿ' ಎಂದು ಮಂಗ ಅವಕ್ಕೆ ಹೇಳಿತು.

ಅವು ಮಂಗನ ಮನಸ್ಸನ್ನು ಮೆಚ್ಚಿಕೊಂಡು ತಮ್ಮ ಪಾಲಿನ ಬೆಣ್ಣೆಯಲ್ಲಿ ಸ್ವಲ್ಪ ಬೆಣ್ಣೆಯನ್ನು ಮಂಗನಿಗೆ ಕೊಟ್ಟವು. ಮಂಗನಿಗೆ ಬಹಳ ಸಂತೋಷವಾಯಿತು. ಬೆಕ್ಕು ಹಾಗೂ ಮಂಗ ಬೆಣ್ಣೆ ತಿಂದು ತೃಪ್ತಿಪಟ್ಟವು.

ನಂತರ ಮಂಗ, 'ಬೆಕ್ಕಣ್ಣ, ನಾನು ನಿಮ್ಮ ಜಗಳದಲ್ಲಿ ಲಾಭ ಮಾಡಿಕೊಳ್ಳುವ ಆಸೆ ಹೊಂದಿದ್ದೆ. ನಿಮ್ಮ ಮುಗ್ಧ ಸ್ವಭಾವವನ್ನು ನೋಡಿ ನಿಮಗೆ ಮೋಸ ಮಾಡಲು ನನ್ನ ಮನಸ್ಸು ಒಪ್ಪಲಿಲ್ಲ. ಹಿಂದೆ ನಮ್ಮ ಹಿರಿಯನು ನಿಮ್ಮ ಹಿರಿಯನಿಗೆ ಮೋಸ ಮಾಡಿದ್ದಾನೆ. ಅದು ಮುಂದುವರಿಯುವುದು ಬೇಡ, ನಾನು ಮೋಸಗಾರನಾಗಲಾರೆ. ನಾನು ನಿಮ್ಮ ಸ್ನೇಹವನ್ನೂ ಮರೆಯಲಾರೆ. ನಾವೆಲ್ಲ ಪ್ರೀತಿಯಿಂದ ಬಾಳೋಣ. ನೀವು ಪರಸ್ಪರ ಜಗಳ ಮಾಡಬೇಡಿರಿ. ಪರಸ್ಪರ ಹಂಚಿಕೊಂಡು ತಿನ್ನುವುದನ್ನು ಕಲಿಯಿರಿ. ನಿಮ್ಮ ಜಗಳ ನೀವೇ ಬಗೆಹರಿಸಿಕೊಳ್ಳಿ. ನೀವು ಮೂರನೆಯವರಿಗೆ ಅವಕಾಶ ನೀಡಬೇಡಿರಿ. ನನಗೇ ಹೆಚ್ಚು ಬೆಣ್ಣೆ ಕೊಟ್ಟದ್ದಕ್ಕಾಗಿ, ನನ್ನ ಮನಸ್ಸನ್ನು ಪರಿವರ್ತನೆ ಮಾಡಿದ್ದಕ್ಕಾಗಿ ನಿಮಗೆ ಧನ್ಯವಾದಗಳು' ಎಂದು ಹೇಳಿ ಮಂಗ ಮರಹತ್ತಿ ಹೊರಟು ಹೋಯಿತು.

'ನಾವು ಎಂದೂ ಜಗಳ ಮಾಡದೆ ಪ್ರೀತಿಯಿಂದ ಬಾಳೋಣ' ಎಂದು ಬೆಕ್ಕುಗಳು ನಿರ್ಧರಿಸಿ ಮತ್ತೆ ಮುದುಕಿಯ ಮನೆಗೆ ಹೋದವು.

✳